ಎಷ್ಟು ನೀರನ್ನು ನಮಗೆ ಲಭ್ಯ ಮಾಡಿಕೊಡುತ್ತಾರೆ ಎಂಬ ಬಗ್ಗೆ ಇವತ್ತು ಅಂದಾಜು ಮಾಡುವುದಕ್ಕಾಗುವುದಿಲ್ಲ. ಇದೆಲ್ಲಾ ಅನಿಶ್ಚಿತತೆ ಇರುವುದರಿಂದ ಇರುವುದರಿಂದ ನಾವು ಕರಾರುವಕ್ಕಾಗಿ ಇಷ್ಟೇ ನೀರು ಸಂಗ್ರಹ ಮಾಡುವುದಕ್ಕೆ ಸಾಧ್ಯ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ರಾಜುಗೌಡ : ನನ್ನ ಅಭಿಪ್ರಾಯ ಏನೆಂದರೆ ಈ ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಕೊಳ್ಳಗಳನ್ನು ಪೂರ್ತಿ ಉಪಯೋಗಿಸಿಕೊಂಡಾಗ ಬಹುಶಃ ಜಲಸಂಗ್ರಹದ ಸಾಮರ್ಥ್ಯ ಎಷ್ಟಾಗಬಹುದು? ಅದರಿಂದ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕ ಭೂಮಿಯಲ್ಲಿ ಎಷ್ಟು ವ್ಯವಸಾಯ ಮಾಡುವುದಕ್ಕೆ ಆಗುತ್ತದೆ? ತಾವು ಒಂದು ಹೆಕ್ಟೇರ್‌ಗೆ 75 ಸಾವಿರ ರೂಪಾಯಿ ಖರ್ಚಾಗುತ್ತದೆಂದು ಏನು ಹೇಳಿದ್ದೀರಿ ಬಹುಶಃ ಯಾವುದೇ ನೀರಾವರಿ ಯೋಜನೆ ಕೈಗೆತ್ತಿಕೊಂಡಾಗ ವೆಚ್ಚದ ಗರಿಷ್ಟ ಮಿತಿ ಎಷ್ಟು? ಅದಕ್ಕಿಂತ ಜಾಸ್ತಿಯಾದಾಗ ಫೀಸಬಲ್ ಅಲ್ಲ ಎಂದು ಹೇಳುತ್ತೀರಿ. ಈ ವರ್ಷದಲ್ಲಿ ಅತ್ಯಂತ ಗರಿಷ್ಟ ವೆಚ್ಚದ ಮಿತಿ ಎಷ್ಟು ತಿಳಿಸಬೇಕು. ಭೂಮಿ ಕೆಳಗೆ ಇರತಕ್ಕ ಜಲಸಂಪತ್ತು ಬೇಕಾಗಿಲ್ಲ. ಭೂಮಿ ಮೇಲೆ ಇರತಕ್ಕ ಜಲಸಂಪತ್ತನ್ನು ಪೂರ್ಣವಾಗಿ ಉಪಯೋಗಿಸಿಕೊಂಡಾಗ ಬಹುಶ: ನಮ್ಮ ಜಲಸಂಗ್ರಹದ ಸಾಮರ್ಥ್ಯ ಎಷ್ಟಾಗುತ್ತದೆ? ಅರೆ ಕೃಷಿ ಬೆಳೆಗೆ ಎಷ್ಟು ನೀರಾವರಿಯಾಗುತ್ತದೆ ಎಂಬ ಬಗ್ಗೆ ಒಂದು ಸಮೀಕ್ಷೆ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ ಬಹಳ ಕಷ್ಟದಲ್ಲಿ ಸಮೀಕ್ಷೆಯಾಗುತ್ತದೆ. ಏಕೆಂದರೆ ಕೆಲವು ಕಡೆ ಅರೆ ಖುಷ್ಕಿ ನೀರಾವರಿಗೆ ನೀರು ಕೊಡುತ್ತೇವೆ ರೈತರು ಕಬ್ಬು ಮತ್ತು ಬತ್ತ ಬೆಳೆಯುತ್ತಾರೆ. ಕ್ರಾಪ್ ಪ್ಯಾಟ್ರನ್‌ನಲ್ಲಿ ಶಿಸ್ತು ಇಲ್ಲ. ಹಳ್ಳಕೊಳ್ಳಗಳಲ್ಲಿ ಸಂಗ್ರಹವಾಗತಕ್ಕ ನೀರು ಎಷ್ಟೆಂಬುದರ ಬಗ್ಗೆ ನಾವು ಇದುವರೆಗೂ ಸಮೀಕ್ಷೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಸಂಗ್ರಹ ಮಾಡುವುದರಿಂದ ಫಲ ದೊರಕುತ್ತದೆಂದರೆ ಅದನ್ನು ಮಾಡಬಹುದು.

ಶ್ರೀ ಜಿ . ರಾಜೂಗೌಡ : ಸಾಮಾನ್ಯವಾಗಿ ನೀರಾವರಿ ತಜ್ಞರು ಅಭಿಪ್ರಾಯಪಟ್ಟಿರುವ ಪ್ರಕಾರ ಟಿಎಂಸಿ ನೀರಿನಲ್ಲಿ ಸುಮಾರು 10 ಸಾವಿರ ಎಕರೆ ಅರೆ ಖುಷ್ಕಿ ಬೆಳೆ ಬೆಳೆಯಬಹುದು. ತಾವು 515 ಟಿಎಂಸಿ ನೀರು ಸಂಗ್ರಹ ಮಾಡತಕ್ಕ ಸಾಮರ್ಥ್ಯವಿದೆಯೆಂದು ಹೇಳುವುದರಿಂದ ಬಹುಶಃ 51 ಲಕ್ಷದ 50 ಸಾವಿರ ಎಕರೆ ಭೂಮಿಯಲ್ಲಿ ಅರೆ ಖುಷ್ಕಿ ಬೆಳೆ ಮಾಡಬಹುದು. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ನೀರು ಎಷ್ಟೆಷ್ಟು ದೊರಕುತ್ತದೆಂದು ತಾವು ಹೇಳುವುದಕ್ಕಾಗುವುದಿಲ್ಲವೆ? ಅದನ್ನು ದಯಮಾಡಿ ಮಾನ್ಯ ಉಪಮುಖ್ಯಮಂತ್ರಿಗಳು ತಿಳಿಸುವರೆ?

ಶ್ರೀ ಎಸ್. ಎಂ ಕೃಷ್ಣ : ಮಾನ್ಯ ,ಸದಸ್ಯರು ತಮ್ಮ ಪ್ರಶ್ನೆಗೆ ತಾವೇ ಉತ್ತರ ಹೇಳಿದ್ದಾರೆ.

ವಿಷಯ : ಬಾಗೇವಾಡಿ ಮತ ಕ್ಷೇತ್ರದಲ್ಲಿ ಏತನೀರಾವರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 137(741)

ಶ್ರೀ ಕೆ ಮಾದಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಾಗೇವಾಡಿ ಮತ ಕ್ಷೇತ್ರದಲ್ಲಿ ಕಾಮಶಿನಕೊಪ್ಪ ಹತ್ತಿರ ಮಲಪ್ರಭ ನದಿಗೆ ಏತ ನೀರಾವರಿ ಯೋಜನೆಯು ಮಂಜೂರಾಗಿದೆಯೇ;

ಆ) ಹಾಗಿದ್ದಲ್ಲಿ 1994-95ನೇ ಸಾಲಿನಲ್ಲಿ ಎಷ್ಟು ಅನುದಾನ ಒದಗಿಸಿದ್ದಾರೆ;

ಇ) ಯಾವಾಗ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇಲ್ಲ

ಆ) 1994-95ನೇ ಸಾಲಿನ ಇಡಿಗಂಟು ಅನುದಾನದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗುತಿದೆ.

ಇ) ಆಯವ್ಯಯದಲ್ಲಿ ಸೇರಿದ ನಂತರ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನುಸಾರ ಅಂದಾಜಿಗೆ ಅನುಮೋದನೆ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

Sri. K.C, Modagekar Desai : Sir, the reply given by the Hon'ble Minister is absolutely wrong, because already Rs. 40 lakhs has been sanctioned in the Búdget and it has also appeared in the Budget book. Therefore, Iam requesting the government to clear it from the Finance Department and release the money. Belgaum District is a backward district it requires special attention. The government has agreed to give money but the Finance Department is troubling us. I request you kindly release the amount so that the Department can take this work very urgently.

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೆ, ಈ ಯೋಜನೆಯನ್ನು ಸ್ಥಳೀಯ ಶಾಸಕರ ಬೇಡಿಕೆ ಪ್ರಕಾರ ಅಲ್ಲಿರತಕ್ಕ ನಮ್ಮ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಸರ್ವೆ ಮಾಡಿಸಿ ಕಳುಹಿಸಿಕೊಟ್ಟಿದ್ದಾರೆ. ಅದರ ಪ್ರಕಾರ ಸರ್ಕಾರ ಆದೇಶ ಹೊರಡಿಸಿ ಕಾರ್ಯಕ್ರಮ ಹಾಕಿಕೊಂಡಿದೆ. ಈ ವರ್ಷ 1994-95ರಲ್ಲಿ ಸಾಂಕೇತಿಕವಾಗಿ ಬಂದಮೇಲೆ ಬರತಕ್ಕ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ.

ವಿಷಯ : ತುಂಗಾ ಮೇಲ್ದಂಡೆ ಯೋಜನೆಯ ವಿವರ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 140 (673)

ಶ್ರೀ ಮಂಜುನಾಥ್ ಸಿ. ಕುನ್ನೂರ. (ಶಿಗ್ಗಾಂವ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.